# ವ್ಯಷ್ಟಿ ಪ್ರಜ್ಞೆ-ಸಮಷ್ಟಿ ಪ್ರಜ್ಞೆ

ವ್ಯಕ್ತಿ ದೊಡ್ಡವನೋ ಸಮುದಾಯ ದೊಡ್ಡದೋ ಅಥವಾ ಆಯ್ಕೆಯ ಪ್ರಶ್ನೆ ಬಂದಾಗ ವ್ಯಕ್ತಿಯೋ ಸಮುದಾಯವೋ ಎಂಬ ಸಮಸ್ಯೆ ಎದುರಾದಾಗ ಸಮುದಾಯದ ಕಡೆ ವಾಲುವುದು ಜನಪರ- ಪ್ರಗತಿಪರ ನಿಲುವು. ಹಾಗಾದರೆ ವ್ಯಕ್ತಿ ಅಮುಖ್ಯನೇ ಎಂದು ಚಿಂತನೆ ಮಾಡಿದಾಗ 'ಅವನು ಅಮುಖ್ಯನಲ್ಲ, ಅವನೂ ಮುಖ್ಯ' ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ವ್ಯಕ್ತಿ ಸಮುದಾಯದ ಅತ್ಯಂತ ಕಿರಿಯ ಅಂಶ, ಘಟಕ. ಅಂಥ ನೂರಾರು ಘಟಕಗಳು ಕೂಡಿ ಸಮುದಾಯ ಸೃಷ್ಟಿಯಾಗಿರುತ್ತದೆ. ಅಂದರೆ ವ್ಯಕ್ತಿಯಿಲ್ಲದೆ ಸಮುದಾಯವಿಲ್ಲ. ವ್ಯಕ್ತಿ ಆ ಸಮುದಾಯದೊಳಗಿದ್ದಾನೆ. 'ಸಮುದಾಯ'ವೆಂದು ಕರೆದಾಗ ಅನೇಕ ವ್ಯಕ್ತಿಗಳಿದ್ದಾರೆ. ಆದರೆ ಒಬ್ಬ 'ವ್ಯಕ್ತಿ' ಸಮಗ್ರ ಸಮುದಾಯವಾಗಲಾರ. ಸಮುದಾಯದ ಕಲ್ಯಾಣದಲ್ಲಿ ವ್ಯಕ್ತಿಯ ಕಲ್ಯಾಣವು ಖಂಡಿತವಾಗಿಯೂ ಇರುತ್ತದೆ. ಆದರೆ ಒಬ್ಬ ವ್ಯಕ್ತಿಯ ಕಲ್ಯಾಣ ಒಂದು ಸಮುದಾಯದ ಕಲ್ಯಾಣವಾಗದಿರುವ ಸಂದರ್ಭಗಳಿರುತ್ತವೆ. ಅನೇಕ ವೇಳೆ ವ್ಯಕ್ತಿ ಸ್ವಾರ್ಥಿಯಾದಾಗ ಅವನಿಗೆ ಸಮುದಾಯ ಹಿತ ಅಗಣ್ಯವಾಗುತ್ತದೆ. ಅವನು ಲೋಭಿಯೂ ಸ್ವಹಿತ-ಸ್ವಕುಟುಂಬ ಮೋಹಿಯೂ ಆಗಿ ಸಮುದಾಯವನ್ನು ತನ್ನ ವ್ಯಕ್ತಿಗತ ಆಸೆಗಳಿಗೆ ಬಳಸಿಕೊಂಡು ಶೋಷಕನಾಗುತ್ತಾನೆ. ಅರ್ಥ ಮತ್ತು ಅಧಿಕಾರಗಳನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡು ಮುಗ್ಧವೂ ಅಸಹಾಯಕವೂ ಆಗಿಹೋದ ಸಮುದಾಯವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ನಿರಂಕುಶನಾಗುತ್ತಾನೆ. ಆಗಲೇ ಸರ್ವಾಧಿಕಾರಿಗಳು, ಉಗ್ರ ಧಾರ್ಮಿಕ ನಾಯಕರುಗಳು ಸೃಷ್ಟಿಯಾಗುವುದು.

ಸಮುದಾಯದಲ್ಲಿ ಸಮಷ್ಟಿಹಿತ ಪ್ರಜ್ಞೆಯನ್ನು ಜಾಗ್ರತಗೊಳಿಸಿ, ಅವರನ್ನು ಸರ್ವಾಧಿಕಾರ, ಭ್ರಷ್ಟತನ, ಮತ ಮೌಢ್ಯ ಮುಂತಾದ ಅನಿಷ್ಟಗಳ ವಿರುದ್ಧ ಒಗ್ಗೂಡಿ ಹೋರಾಡುವಂತೆ ಸಂಘಟಿಸುವವನು ಕೂಡ ಒಬ್ಬ ಪ್ರಜ್ಞಾವಂತ ವ್ಯಕ್ತಿಯೇ ಆಗಿರುತ್ತಾನೆಂಬುದು ಕೂಡ ವಾಸ್ತವ ಸತ್ಯ. ಯುರೋಪಿನ ಧಾರ್ಮಿಕ ಶೋಷಣೆಯನ್ನು ನಿವಾರಿಸಲು ಬೆಳಕಿನಂತೆ ಧುತ್ತನೆ ಮೂಡಿದವನು ಕ್ರಿಸ್ತ; ಭಾರತದ ವರ್ಣ ವ್ಯವಸ್ಥೆ, ಆರ್ಥಿಕ ಅಸಮಾನತೆ, ದೈವ ಪರಿಕಲ್ಪನೆಗಳ ವಿರುದ್ಧ ಹೋರಾಟ ಸಾರಿದವನು ಬುದ್ಧ; ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಜನರನ್ನು ಸತ್ಯ ಅಹಿಂಸೆಗಳ ದಾರಿಯಲ್ಲಿ ಸಂಘಟಿಸಿದವನು ಮೋಹನದಾಸ ಕರಮಚಂದ ಗಾಂಧಿ; ಶತ ಶತಮಾನಗಳ ದಾಸ್ಯ ಅವಮಾನಗಳ ಸುಳಿಯಲ್ಲಿ ಸಿಲುಕಿ ನೊಂದು ಬೆಂದು ಬಸವಳಿದಿದ್ದ ದಲಿತರಿಗೆ ಬೆಳಕು ತೋರಿದವನು ಒಬ್ಬ ಬಾಬಾ ಸಾಹೇಬ ಅಂಬೇಡ್ಕರ್. ಇವರೆಲ್ಲಾ ವ್ಯಕ್ತಿಗಳೇ! ವ್ಯಷ್ಟಿ ಪ್ರಜ್ಞೆಯ ಮೂಲಕ ಒಂದು ಸಮಾಜ, ದೇಶ, ಜನಾಂಗಗಳಿಗೆ ನಾನಾ ಬಗೆಯ ಸಮಸ್ಯೆಗಳಿಂದ ಮುಕ್ತವಾಗುವ ಬಗೆಯನ್ನು; ಹೋರಾಡುವ ಛಲವನ್ನು; ಸವಾಲುಗಳನ್ನು ಸ್ವೀಕರಿಸಿ ನಿಭಾಯಿಸುವ ಮನೋಧರ್ಮವನ್ನು ರೂಪಿಸಿಕೊಟ್ಟ ಅಸಾಮಾನ್ಯರು. ಅಂದರೆ ಸಾಮಾನ್ಯತೆಯ ಒಡಲೊಡಗಿನಿಂದಲೇ ಈ ಅಸಮಾನ್ಯ ಚಿಂತಕರು, ಮನೋ ಸಾಹಸಿಗಳು ಜನ್ಮ ತಾಳುತ್ತಾರೆ.

ಅಂದರೆ ವ್ಯಷ್ಟಿಯಿಂದ ಸಮಷ್ಟಿಯೋ? ಸಮಷ್ಟಿಯಿಂದ ವ್ಯಷ್ಟಿಯೋ? ಈ ಪ್ರಶ್ನೆ ಬೀಜ ಮರ ಸಿದ್ಧಾಂತದಂತೆ ಜಟಿಲವಾಗುತ್ತದೆ. ವ್ಯಕ್ತಿಗೆ ತನ್ನಿಂದ ತಾನೆ ಜ್ಞಾನವೆಂಬುದು ಮೂಡಲು ಸಾಧ್ಯವಿಲ್ಲ. 'ಜ್ಞಾನೋದಯ', 'ದೈವಕೃಪೆ', 'ವರ ಪ್ರಸಾದ' ಎಂಬೆಲ್ಲಾ ಮಾತುಗಳನ್ನು; ತಮ್ಮ ವ್ಯಕ್ತಿಗತ ಅಸಾಧಾರಣ ವ್ಯಷ್ಟಿ ಪ್ರಜ್ಞೆಯಿಂದ ಸಮಾಜವನ್ನು ಪರಿವರ್ತಿಸುವ, ಒಂದು ಜನಾಂಗದ ದೃಷ್ಟಿ ಧೋರಣೆಗಳನ್ನೇ ಬದಲಾಯಿಸುವ ವ್ಯಕ್ತಿಗಳನ್ನು ದೇವಮಾನವರೆಂದೋ ಅವತಾರ ಪುರುಷರೆಂದೋ ಕರೆಯುವ ಮಾತುಗಳನ್ನು ಅವೈಚಾರಿಕ ಅತಾರ್ಕಿಕವಾದವುಗಳೆಂದು ಭಾವಿಸುವುದು ಒಳ್ಳೆಯದು. ಸಮಾಜಜೀವಿಯಾದ ವ್ಯಕ್ತಿ ತನ್ನ ಬೌದ್ಧಿಕ ವಿಕಾಸಕ್ಕೆ ಅಂತರಂಗದ ಜಾಗೃತಿಗೆ ಬೇಕಾದ ಸತ್ವ ಸಂಜೀವಿನಿಯನ್ನು ತನ್ನ ಸುತ್ತಲಿನ ಪ್ರಪಂಚದಿಂದಲೇ ಪಡೆಯುತ್ತಾನೆ. ತಾನು ಉಸಿರಾಡುತ್ತಿರುವ ಸ್ಥಿತಿಯನ್ನು ಮನಗಂಡು, ಅದು ಸಮಾನತೆಯ ಮಾನವೀಯತೆಯ ನೆಲೆಯತ್ತ ಹೊರಳಬೇಕಾದರೆ ಏನೆಲ್ಲಾ ಆಗಬೇಕು ಮತ್ತು ಹಾಗೆ ಆಗುವ ಪ್ರಕ್ರಿಯೆಯಲ್ಲಿ ಸಾಗುವ ಹೋರಾಟದಲ್ಲಿ ಏನೆಲ್ಲಾ ಅವಗಡಗಳು ಸಂಭವಿಸಬಹುದು, ಆ ಅವಗಡಗಳನ್ನು ನಿವಾರಿಸಿಕೊಂಡು ಸಮಾನತೆಯ ಕಡೆ ನಡೆಯಲು ಅನುಸರಿಸಬೇಕಾದ ಜೀವನ ಮಾರ್ಗಸೂಚಿಗಳನ್ನು ಅವನು ತನ್ನೊಳಗೆ ಮೊದಲು ಕಡೆಯುತ್ತಾನೆ. ಅವುಗಳನ್ನು ಮತ್ತೆ ಮತ್ತೆ ವಿಮರ್ಶಿಸುತ್ತಾನೆ; ಸಾಧಕ ಬಾಧಕಗಳನ್ನು ವಿವೇಚಿಸುತ್ತಾನೆ. ಅವುಗಳ ಅನುಷ್ಠಾನಕ್ಕೋಸ್ಕರ ತನ್ನೊಡನೆ ಕೈ ಜೋಡಿಸುವ ಸಮಾನ ಮನಸ್ಕರನ್ನು ಗುರುತಿಸಿ, ಅವರ ಎದೆಯಲ್ಲಿ ತನ್ನ ಚಿಂತನೆಯನ್ನು ಬಿತ್ತುತ್ತಾನೆ. ಅದು ಅವರಲ್ಲಿ ಒಪ್ಪಿತವಾದರೆ, ಅದು ಮೊಳೆತು ಸಾವಿರಾರು ಧ್ವನಿಯಾಗಿ ಮೊಳಗುತ್ತದೆ ಎಂದು ಅರಿಯುತ್ತಾನೆ. ಸಾವಿರಾರು ಧ್ವನಿಗಳಲ್ಲಿ ತನ್ನ ಧ್ವನಿಯನ್ನು ಗುರುತಿಸುತ್ತಾನೆ. ಆದರೆ ಅದು ಅಲ್ಲಿಯೇ ಐಕ್ಯವಾಗುವ ಎಚ್ಚರವಹಿಸುತ್ತಾನೆ. ಅದು ಜನರ ಧ್ವನಿಯಾಗಿ, ಶಕ್ತಿಯಾಗಿ, ಸಮಷ್ಟಿ ಪ್ರಜ್ಞೆಯಾಗಿ ವ್ಯಷ್ಟಿ ಪ್ರಜ್ಞೆ ನಿರಶನವಾಗುವ ಪ್ರಕ್ರಿಯೆ ಹೀಗೆ ಬೆಳೆಯುತ್ತದೆ.

ಬುದ್ಧ, ಕ್ರಿಸ್ತ, ಗಾಂಧಿ ಮುಂತಾದವರನ್ನು ಈ ಹಿನ್ನೆಲೆಯಲ್ಲಿ ವ್ಯಕ್ತಿಗಳೆಂದು ಕರೆಯುವಂತಿಲ್ಲ. ಅವರು ಒಂದು ಕಾಲಘಟ್ಟದ, ಸಮುದಾಯದ ಅನಿವಾರ್ಯ ಪರಿವರ್ತನೆಯ ಸಮಷ್ಟಿ ಪ್ರಜ್ಞೆಯೆಂದೇ ಭಾವಿಸಬೇಕು.

■ ಶಿಕಾಕು

## ಮಾತೇ ಮುತ್ತು

★ ಸಾರ್ವಜನಿಕ ಹಣ ದೇವರ ಪ್ರಸಾದದಂತೆ; ಎಲ್ಲರಿಗೂ ಬೇಕು!

-ಇಟಲಿ ಗಾದೆ

★ ಆಗಾಗ ದೊರೆಯುವ ಪೈಸೆ, ಅಪರೂಪದ ರೂಪಾಯಿಗಿಂತ ಲೇಸು.

-ಹಂಗೇರಿ ಗಾದೆ

★ ಅಪ್ಪ ಹಾಕಿದ ಆಲದ ಮರ, ಮಗನ ಕಾಲಕ್ಕೆ ಬರಿಯ ಬುಡ; ಮೊಮ್ಮಗನಿಗಿರಲಿಲ್ಲ ಅದರ ಕಲ್ಪನೆ ಕೂಡ- ಹೀಗೆ ಹುಟ್ಟಿದ್ದೇವೆ ನಾವು!

-ಕೆ.ಎಸ್.ನರಸಿಂಹಸ್ವಾಮಿ

★ ಹುಟ್ಟಿನ ಜೊತೆಯಲ್ಲೇ ಹೊತ್ತುತಂದ ಹೊರೆ- ಸಾವು.

-ತರಾಸು

★ ಮಲ್ಲಯುದ್ಧದಲ್ಲಿ ತನ್ನ ಎದುರಾಳಿಯನ್ನು ಸೋಲಿಸುವವನು ಶಕ್ತಿಶಾಲಿಯಲ್ಲ. ಬದಲಾಗಿ ಕೋಪ ಬಂದಾಗ ಅದನ್ನು ತನ್ನ ನಿಯಂತ್ರಣದಲ್ಲಿ ಇರಿಸುವವನೇ ನಿಜವಾದ ಶಕ್ತಿಶಾಲಿ.

-ಮುಹಮ್ಮದ್ ಪೈಗಂಬರ್

★ ದೇವರೇ ನಮ್ಮನ್ನು ಹುಟ್ಟಿಸಿದ್ದಾನೆ ಎಂತ ತಿಳಿಯುವುದಾದರೆ, ಕೊಡುವಷ್ಟನ್ನು ಕೊಟ್ಟೇ ಹುಟ್ಟಿಸಿದ್ದಾನೆ ಎಂತ ತಿಳಿಯಬೇಕು.

-ಶಿವರಾಮ ಕಾರಂತ

★ ಹೆಣ್ಣಿನ ಜೀವನದಲ್ಲಿ ಪರಿಪೂರ್ಣತೆ ಬರುವುದು ದಾಂಪತ್ಯ ಜೀವನದಲ್ಲಿ, ತಾಯಿತನದ ಸೌಖ್ಯದಲ್ಲಿ.

-ಕೃಷ್ಣಮೂರ್ತಿ ಪುರಾಣಿಕ

★ ಹೆಣ್ಣು ಪಂಜರ ಜೀವಿ, ಗಂಡು ಅಂಬರ ಜೀವಿ.

-ನಾ.ಕಸ್ತೂರಿ

★ ಹೆಣ್ಣಿಂದ ಮೇಲೆ ಬುದ್ಧಿ ಮೊಟಕು, ಅದರಿಂದಲೇ ಗಂಡು ಇಷ್ಟೆಲ್ಲಾ ಆಟ ಆಡೋದು.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಸುಖವನರಿಯದ ಹೆಣ್ಣು ಸೂಳೆಯಾದಳು. ಲಿಂಗವನರಿಯದ ಭಕ್ತ ಶೀಲವಂತ ಪ್ರಪಂಚಿಯಾದ. ಈ ಸೂಳೆಗೆ ಸುಖವುಂಟೆ? ಈ ಶೀಲಕ್ಕೆ ಗತಿಯುಂಟೆ?

-ಅಲ್ಲಮ ಪ್ರಭು

★ ಹೆಂಡತಿ ಗುಣವಂತೆಯಾದರೆ ಎಲ್ಲ ಭಾಗ್ಯವೂ ಇದ್ದಂತೆ. ಗುಣವಂತೆಯಲ್ಲದಿದ್ದರೆ ಎಷ್ಟು ಭಾಗ್ಯವಿದ್ದರೂ ಇಲ್ಲದಂತೆಯೇ.

-ತಿರುಕ್ಕುರುಳ್

★ ಹೆಂಡತಿ ಮನೆಯ ಬೀಗದಕೈ; ಯುವಕನ ರಾಣಿ; ಮುದುಕನ ದಾದಿ.

-ಇಂಗ್ಲಿಷ್ ಗಾದೆ

★ ಹೊಗಳಿಕೆಗೆ ಅರ್ಹತೆ ಇಲ್ಲವೆಂದು ತಿಳಿದಿದ್ದರೂ, ಅದರಲ್ಲಿ ನಂಬಿಕೆ ಇಲ್ಲದಿದ್ದರೂ, ಹೊಗಳಿದಾಗ ಯಾರೂ ಅತೃಪ್ತರಲ್ಲ; ದುಃಖಿಗಳಲ್ಲ.

-ಮೈಕೇಲ್ ಮಾಕೋಬಿ

★ ಹೊಗಳಿಕೆಯೇ ತೆಗಳಿಕೆಯ ಆರಂಭ.

-ಜಪಾನಿ ಗಾದೆ

★ ಹೊಗಳದೆ ಮಾರಲಾರೆ, ತೆಗಳದೆ ಕೊಳ್ಳಲಾರೆ.

-ರಷ್ಯಾ ಗಾದೆ

★ ಹೊಗಳಿಕೆ ಖಾಯಿಲೆ, ಖಂಡನೆ ಔಷಧಿ.

-ಚೀನಾ ಗಾದೆ